ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY

ಜ್ಞಾನ ಜ್ಯೋತಿ–ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
**Ph.No.080-22961016 / 22131385 E-Mail ID: registrar@bcu.ac.in**

ಸಂಖ್ಯೆ: ಬೆಂ.ನ.ವಿ/ಶೈಕ್ಷಣಿಕ/ಸ್ನಾ.ಕೋ.ಪ್ರವೇಶ/08/2024-25 ದಿನಾಂಕ: 08.11.2024

## ಅಧಿಸೂಚನೆ

ವಿಷಯ: 2024–25ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಕೋರ್ಸುಗಳಿಗೆ 3ನೇ ಸುತ್ತಿನ ಪ್ರವೇಶಾತಿಗೆ ಅರ್ಜಿಗಳ ಆಹ್ವಾನಿಸುವ ಕುರಿತು:

ಉಲ್ಲೇಖ: 1. ಸಂಖ್ಯೆ: ಬೆಂ.ನ.ವಿ/ಶೈಕ್ಷಣಿಕ/ಸ್ನಾ.ಕೋ.ಪ್ರವೇಶ/08/2024-25 ದಿನಾಂಕ:27.08.2024
2. ಸಂಖ್ಯೆ: ಬೆಂ.ನ.ವಿ/ಶೈಕ್ಷಣಿಕ/ಸ್ನಾ.ಕೋ.ಪ್ರವೇಶ/08/2024-25 ದಿನಾಂಕ:30.10.2024

******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖದ ಅಧಿಸೂಚನೆಯ ಅನುಸಾರ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಮೊದಲನೇ ಮತ್ತು ಎರಡನೇ ಸುತ್ತಿನ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿ ಪ್ರಕ್ರಿಯೆಯ ನಂತರ ಈ ಕೆಳಕಂಡ ಸ್ನಾತಕೋತ್ತರ ವಿಭಾಗಗಳಲ್ಲಿ ಭರ್ತಿಯಾಗದೇ ಉಳಿದಿರುವ ಸೀಟುಗಳಿಗೆ ಮೂರನೇ ಸುತ್ತಿನ ಪ್ರವೇಶಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**(Through the UUCMS Online portal https://uucms.karnataka.gov.in/Login/Index)**

ಅ. ಕಲಾ ನಿಕಾಯ:

ಎಂ.ಎ: ಕನ್ನಡ, ಇಂಗ್ಲೀಷ್, ಫ್ರೆಂಚ್, ಜರ್ಮನ್, ಸ್ಪಾನಿಷ್, ಜಪಾನೀಸ್, ಇತಿಹಾಸ, ಅರ್ಥಶಾಸ್ತ್ರ, ಸಮಾಜ ಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಕಾರ್ಯ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ,

ಎಂ.ವಿ.ಎ: 1. ಅನಿಮೇಷನ್ ಡಿಸೈನ್ 2. ಇಂಟಿರಿಯರ್ ಡಿಸೈನ್ 3. ಅಪ್ಲೈಡ್ ಆರ್ಟ್ಸ್ 4. ಆರ್ಟ್ ಹಿಸ್ಟ್ರಿ 5. ಪೇಯಿಂಟಿಂಗ್, 6. ಪ್ರಿಂಟ್ ಮೇಕಿಂಗ್, 7. ಸ್ಕಲ್ಪಚರ್.

ಆ. ವಿಜ್ಞಾನ ನಿಕಾಯ:

- ಎಂ.ಎಸ್ಸಿ : ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಜೀವರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಉಡುಪು ತಂತ್ರಜ್ಞಾನ ಮತ್ತು ನಿರ್ವಹಣೆ, ಪರಿಸರ ವಿಜ್ಞಾನ, ಜೈವಿಕ ತಂತ್ರಜ್ಞಾನ, ಮನಃಶಾಸ್ತ್ರ, ಮಾನಸಿಕ ಸಮಾಲೋಚನೆ, ಸ್ಪೀಚ್ ಲ್ಯಾಂಗ್ವೇಜ್ ಪ್ಯಾಥಾಲಜಿ, ಇಂಟೀರಿಯರ್ ಡಿಜೈನ್ ಅಂಡ್ ಡೆಕೊರೇಷನ್, ನ್ಯೂಟ್ರೀಷನ್ ಅಂಡ್ ಡಯಾಟಿಕ್ಸ್, ಗಣಕ ವಿಜ್ಞಾನ

ಇ. ವಾಣಿಜ್ಯ ನಿಕಾಯ:

5. ಎಂ.ಕಾಂ. ಮಾಸ್ಟರ್ ಆಫ್ ಕಾಮರ್ಸ್ (ಜನರಲ್)
6. ಎಂ.ಕಾಂ– ಮಾಸ್ಟರ್ ಆಫ್ ಕಾಮರ್ಸ್ (ಫೈನಾನ್ಸಿಯಲ್ ಅನಾಲಿಸಿಸ್)
7. ಎಂ.ಕಾಂ– ಮಾಸ್ಟರ್ ಆಫ್ ಕಾಮರ್ಸ್ (ಇಂಟರ್‌ನ್ಯಾಷನಲ್ ಬಿಸಿನೆಸ್)
8. ಎಂಟಿಟಿಎಂ– (ಮಾಸ್ಟರ್ ಆಫ್ ಟೂರಿಸಂ ಅಂಡ್ ಟ್ರಾವೆಲ್ ಮ್ಯಾನೇಜ್‌ಮೆಂಟ್)

ಮ.ತಿ.ನೋ

ಅರ್ಜಿ ಸಲ್ಲಿಸಲು ಮಾರ್ಗಸೂಚಿಗಳು:

10. ಅರ್ಹ ಅಭ್ಯರ್ಥಿಗಳು ಸ್ನಾತಕೋತ್ತರ ಕೋರ್ಸುಗಳಿಗೆ **UUCMS Portal** ಮೂಲಕವೇ **Online** ನಲ್ಲಿ ದಿನಾಂಕ: **08.11.2024**ರಿಂದ **https://uucms.karnataka.gov.in** ನಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ
11. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಅರ್ಹ ಕೋರ್ಸ್‌ಗಳಿಗೆ ಅರ್ಜಿಯನ್ನು ಸಲ್ಲಿಸಬಹುದು.
12. ಅರ್ಜಿ ಶುಲ್ಕ **ರೂ. 500/-** ಗರಿಷ್ಠ 3 ವಿಷಯಗಳಿಗೆ ಅರ್ಜಿ ಸಲ್ಲಿಸಲು **UUCMS Portal** ನಲ್ಲಿ ಅವಕಾಶ ಕಲ್ಪಿಸಿದೆ. ಹಾಗೂ 3 ವಿಷಯಗಳಿಗಿಂತ ಹೆಚ್ಚಿನ ವಿಷಯಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಹೆಚ್ಚುವರಿಯಾಗಿ ರೂ. **500/-**ಗಳನ್ನು ಪ್ರತಿ ವಿಷಯಕ್ಕೆ ಪಾವತಿಸಬೇಕಾಗಿರುತ್ತದೆ. (ಪ.ಜಾ/ಪ.ಪಂ, ಪ್ರವರ್ಗ-1 ಮತ್ತು ತೃತೀಯಲಿಂಗ ಅಭ್ಯರ್ಥಿಗಳಿಗೆ ರೂ. 250/- ಕರ್ನಾಟಕ ಅಭ್ಯರ್ಥಿಗಳಿಗೆ ಮಾತ್ರ) ಅಭ್ಯರ್ಥಿಗಳು ಆನ್‌ಲೈನ್ ಮೂಲಕವೇ UUCMS Payment link ಮೂಲಕ ಅರ್ಜಿ ಶುಲ್ಕ ಪಾವತಿಸಬೇಕು.
13. 3ನೇ ಸುತ್ತಿನ 2024-25ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಗಳನ್ನು ದಿನಾಂಕ:21.11.2024ರ ವರೆಗೆ ಯಾವುದೇ ದಂಡ ಶುಲ್ಕವಿಲ್ಲದೆ ಸಲ್ಲಿಸಬಹುದಾಗಿದೆ.
14. ಅರ್ಹತಾ ಪಟ್ಟಿಯ ಪ್ರಕಾರ ಕಲಾ, ವಾಣಿಜ್ಯ ಮತ್ತು ವಿಜ್ಞಾನ ನಿಕಾಯಗಳಿಗೆ ಸಂಬಂಧಪಟ್ಟಂತೆ ಸಮಾಲೋಚನೆಯನ್ನು ಸಂಬಂಧಪಟ್ಟ ವಿಭಾಗಗಳಲ್ಲಿ 25.11.2024 ರಂದು ನಡೆಸಲಾಗುವುದು.
15. UUCMS ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.
16. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಭರ್ತಿ ಮಾಡಿದ ಮುದ್ರಿತ ಪ್ರತಿಯನ್ನು ಅಗತ್ಯವಿರುವ ಪೂರಕ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ನೊಂದಾಯಿತ ಅಂಚೆಯ ಮುಖಾಂತರ ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ತಾವು ಅರ್ಜಿಯಲ್ಲಿ ಆಯ್ದುಕೊಂಡಿರುವ ವಿಷಯಗಳ ವಿಭಾಗದ **"ಅಧ್ಯಕ್ಷರುಗಳಿಗೆ ಪ್ರತ್ಯೇಕವಾಗಿ ಸಲ್ಲಿಸಲು ಕೋರಿದೆ, ವಿಳಾಸ: ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು -560 001"** ಈ ವಿಳಾಸಕ್ಕೆ ಕಳುಹಿಸತಕ್ಕದ್ದು.
17. ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಸಲ್ಲಿಸಿದ ಅಥವಾ ಅಪೂರ್ಣವಾದ ಅರ್ಜಿಗಳನ್ನು ಯಾವುದೇ ಮಾಹಿತಿ ನೀಡದೇ ತಿರಸ್ಕರಿಸಲಾಗುವುದು. **UUCMS Portal ಮೂಲಕ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.**
18. ವಿಷಯ ಸೂಚನೆ: ಯಾವುದೇ ಸ್ನಾತಕೋತ್ತರ ವಿಭಾಗಕ್ಕೆ ಕನಿಷ್ಠ 10 ವಿದ್ಯಾರ್ಥಿಗಳು ನೋಂದಣಿಯಾಗದಿದ್ದ ಪಕ್ಷದಲ್ಲಿ ವಿಶ್ವವಿದ್ಯಾನಿಲಯವು ಆ ಸ್ನಾಕತೋತ್ತರ ಕೋರ್ಸನ್ನು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಆರಂಭಿಸುವುದಿಲ್ಲ.

11. ಹೆಚ್ಚಿನ ಮಾಹಿತಿಗಾಗಿ ಕುಲಸಚಿವರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಇವರನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ:080-22961016/22131385 ಮಿಂಚಂಚೆ: registrar@bcu.ac.in
12. ಮೊದಲನೇ ಮತ್ತು ಎರಡನೇ ಸುತ್ತಿನಲ್ಲಿ ಪ್ರವೇಶಾತಿಗಾಗಿ ಅರ್ಜಿ ಸಲ್ಲಿಸಿ ಆಯ್ಕೆಯಾಗದೇ ಇರುವ ಅಭ್ಯರ್ಥಿಗಳು ಮತ್ತೊಮ್ಮೆ ಅರ್ಜಿ ಸಲ್ಲಿಸಬೇಕಾಗಿರುವುದಿಲ್ಲ. ಅವರು ಈಗಾಗಲೇ ಸಲ್ಲಿಸಿರುವ ಅರ್ಜಿಗಳನ್ನು ಪರಿಗಣಿಸಲಾಗುವುದು.
13. ಮೊದಲನೇ ಮತ್ತು ಎರಡನೇ ಸುತ್ತಿನಲ್ಲಿ ಅರ್ಜಿ ಸಲ್ಲಿಸದ ಅರ್ಹ ವಿದ್ಯಾರ್ಥಿಗಳು ಹೊಸದಾಗಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ.

ಆದೇಶದ ಮೇರೆಗೆ

ಕುಲಸಚಿವರು

ಗೆ,

1. ಎಲ್ಲಾ ಸ್ನಾತಕೋತ್ತರ ವಿಭಾಗದ ಅಧ್ಯಕ್ಷರುಗಳಿಗೆ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
2. ಎಲ್ಲಾ ಸ್ನಾತಕೋತ್ತರ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.

ಪ್ರತಿಗಳು:

1. ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌ), ವಿತ್ತಾಧಿಕಾರಿಗಳರವರ ಆಪ್ತ ಕಾರ್ಯದರ್ಶಿಗಳು, ಬೆ.ನ.ವಿ.ಬೆಂಗಳೂರು.
2. ಅಂತರ್ಜಾಲದ ಪ್ರತಿ/ UUCMS Portal.
3. ಕಛೇರಿ ಪ್ರತಿ/ರಕ್ಷಾ ಕಡತ.